**ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ನಾಗಮಂಗಲ.**

ಉಪಸ್ಥಿತರು
ಶ್ರೀ ಕೆ.ಪಿ. ಸಿದ್ದಪ್ಪಾಜಿ. ಬಿ.ಎ,. ಎಲ್.ಎಲ್.ಬಿ.
ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ.

ದಿನಾಂಕ **21** ನೇ ಜೂನ್ **2023**

ಅಸಲು ದಾವಾ ಸಂಖ್ಯೆ: **262/2014**

ವಾದಿಯರು : ಶಿವರಾಜು ಮತ್ತು ಇನ್ನೊಬ್ಬ.

-: ವಿರುದ್ಧ :-

ಪ್ರತಿವಾದಿಗಳು : ಶ್ರೀ ನರಸಿಂಹಮೂರ್ತಿ ಹಾಗೂ ಇತರರು.

**7 ನೇ ಮಧ್ಯಂತರ ಅರ್ಜಿಯ ಪಕ್ಷಗಾರರ ಸ್ಥಾನಮಾನ**

ಅರ್ಜಿದಾರರು/ ವಾದಿ ನಂಬರ್-1 : ಶಿವರಾಜು ಮತ್ತು ಇನ್ನೊಬ್ಬ.

(ಪ್ರತಿನಿಧಿಸುವವರು: ಶ್ರೀ ಎಸ್.ಎಲ್.ಜಿ., ವಕೀಲರು)

-: ವಿರುದ್ಧ :-

ಎದುರುದಾರರು/
ಪ್ರತಿವಾದಿಗಳು : ಶ್ರೀ ನರಸಿಂಹಮೂರ್ತಿ ಹಾಗೂ ಇತರರು.

(**D-1, 2** ಮತ್ತು **5** ಪ್ರತಿನಿಧಿಸುವವರು: ಶ್ರೀ ಎನ್.ಎಸ್.ಆರ್. ವಕೀಲರು, **D-3, 7** ರಿಂದ **9** ಮತ್ತು **11** ಪ್ರತಿನಿಧಿಸುವವರು: ಶ್ರೀ ಹೆಚ್.ಜಿ.ವಿ. ವಕೀಲರು, **D-4, 6** ಮತ್ತು **10** ಏಕಪಕ್ಷಿಯ)

**7 ನೇ ಮಧ್ಯಂತರ ಅರ್ಜಿಯ ಮೇಲಿನ ಆದೇಶ**

ಮಾನ್ಯ ವಾದಿಗಳ ಪರ ವಕೀಲರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VI ನಿಯಮ 17 ರ ಅಡಿಯಲ್ಲಿ ಸಲ್ಲಿಸಿ, ವಾದ ಪತ್ರವನ್ನು ತಿದ್ದುಪಡಿ ಮಾಡಲು ಅನುಮಾತಿಯನ್ನು ಕೊಡಬೇಕೆಂದು ಕೋರಿರುತ್ತಾರೆ.

2. 1 ನೇ ವಾದಿಯು ಅರ್ಜಿಯ ಸಮರ್ಥನೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ ಅದರಲ್ಲಿ ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ದಾವೆಯನ್ನು ಸಲ್ಲಿಸುವ ಕಾಲದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳು ದೊರಕಿರಲಿಲ್ಲ ಆದರೆ ಇತ್ತೀಚೆಗೆ ದಾಖಲೆಗಳು ಸಿಕ್ಕಿದ್ದರಿಂದ ಅರ್ಜಿಯನ್ನು ಸಲ್ಲಿಸಿರುವುದಾಗಿ, ಪ್ರಸ್ತಾವಿತ ತಿದ್ದುಪಡಿಯನ್ನು ವಾದ ಪತ್ರದಲ್ಲಿ ಸೇರಿಸುವುದು ತುಂಬಾ ಅವಶ್ಯಕವಿದ್ದು, ತಿದ್ದುಪಡಿ ಮಾಡುವ ಅನುಮತಿಸಿದರೆ ಹೊಸ ವ್ಯಾಜ್ಯ ಕಾರಣವಾಗಲಿ ಅಥವಾ ದಾವೆಯ ಸ್ವರೂಪವಾಗಲಿ ಬದಲಾಗುವುದಿಲ್ಲ ಮತ್ತು ಎದುರುದಾರರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಆದ್ದರಿಂದ ಅರ್ಜಿಯನ್ನು ಪುರಸ್ಕರಿಸುವಂತೆ ಪ್ರಾರ್ಥಿಸಿಕೊಂಡಿರುತ್ತಾರೆ.

3. ಮಾನ್ಯ 5 ನೇ ಪ್ರತಿವಾದಿಯ ಪರ ವಕೀಲರು ಅರ್ಜಿಗೆ ತಕರಾರನ್ನು ಸಲ್ಲಿಸಿ, ಅದರಲ್ಲಿ, 1 ನೇ ವಾದಿಯು ಸಲ್ಲಿಸಿರುವ ಅರ್ಜಿಯು ಕಾನೂನಿನ ಅಡಿಯಲ್ಲಾಗಲಿ ಅಥವಾ ಸಂಗತಿಯಿಂದಾಗಲಿ ಊರ್ಜಿತವಾಗತಕ್ಕದಲ್ಲ. 1 ನೇ ವಾದಿಯು ಮುಖ್ಯ ಸಂಗತಿಗಳನ್ನು ಮರೆಮಾಚಿ ದಾವೆಯನ್ನು ವಿಳಂಭ ಮಾಡುವ ಉದ್ದೇಶದಿಂದ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸಿದರೆ ದಾವೆಯ ಸ್ವರೂ ಬದಲಾಗುತ್ತದೆ ಮತ್ತು ಹೊಸ ವ್ಯಾಜ್ಯಕಾರವು ಉದ್ಭವಿಸುತ್ತದೆ. ವಾದ ಪತ್ರವನ್ನು ತಿದ್ದುಪಡಿ ಮಾಡಲು ಮತ್ತು ಆಸ್ತಿನ್ನು ಸೇರಿಸಲು 1 ನೇ ವಾದಿಯು ಅರ್ಜಿಯ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಕಾರಣಗಳು ಸಮರ್ಥನೀಯವಾಗಿ ಮತ್ತು ಯುಕ್ತವಾಗಿರುವುದಿಲ್ಲ ಎಂದು ಹೇಳಿರುತ್ತಾರೆ.

4. ಮುಂದುವರೆದು, 3 ನೇ ಅನುಸೂಚಿಯಾಗಿ ಮತ್ತು 5(a) ಪ್ಯಾರವಾಗಿ ವಾದ ಪತ್ರದಲ್ಲಿ ಸೇರಿಸಲು ತಿದ್ದುಪಡಿ ಮಾಡಲು ಕೋರಿರುವ ಹಳೇ ಮೈಸೂರು, ಕೆ. ಆರ್. ಪೇಟೆಯಲ್ಲಿರುವ ಖಾತೆ ಸಂಖ್ಯೆ1165/1311 ವಿಸ್ತೀರ್ಣ 603.0 ಚದರ ಅಡಿಯು ಸರಿ ಇರುವುದಿಲ್ಲ ಮತ್ತು ಅದು ವಾದಿಗಳು ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ. ಈ ವಿಚಾರವು ಗೊತ್ತಿದರು ಸಹ ಆಸ್ತಿಯನ್ನು ಕಬಳಿಸಲು ಈ ಕಿರುಕುಳಕಾರಿ ಅರ್ಜಿಯನ್ನು ತಿದ್ದುಪಡಿ ಮಾಡಲು ದಾವೆಯಲ್ಲಿ ಸಲ್ಲಿಸಿರುತ್ತಾರೆ. 1 ನೇ ವಾದಿಯು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಮತ್ತು ಅರ್ಜಿಯನ್ನು ತಡವಾಗಿ ಸಲ್ಲಿಸಿರುತ್ತಾರೆ ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ತುಂಬ ನಷ್ಟ ಉಂಟಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಅರ್ಜಿಯನ್ನು ವಜಾಗೊಳಿಸಿ ಆದೇಶ ಮಾಡಬೇಕೆಂದು ಕೋರಿರುತ್ತಾರೆ.

5. ಪಕ್ಷಗಾರರ ಪರ ಹಾಜರಾಗುವ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

6. ಈ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

1. 1 ನೇ ವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VI ನಿಯಮ 17 ರಡಿಯಲ್ಲಿ ಸಲ್ಲಿಸಿರುವ 7 ನೇ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಅರ್ಹವೇ?

2. ಯಾವ ಆದೇಶ?

7. ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| ಅಂಶ ಸಂಖ್ಯೆ 1 | : | ಸಕರಾತ್ಮಕವಾಗಿ. |
| ಅಂಶ ಸಂಖ್ಯೆ 2 | : | ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ. |

<u>ಕಾರಣಗಳು</u>

8. **<u>ಅಂಶ ಸಂಖ್ಯೆ 1 :-</u>** ಮಾನ್ಯ ವಾದಿಗಳು ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ಸಲ್ಲಿಸಿರುತ್ತಾರೆ. ದಾವೆಯು ವಾದಿಯ ಪರ ಮುಖ್ಯ ವಿಚಾರಣೆ ಮುಗಿದು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಿದಾಗ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತುತ ಅರ್ಜಿಯನ್ನು ಹಳೆ ಮೈಸೂರು, ಕೆ.ಆರ್. ಪೇಟೆಯಲ್ಲಿರುವ ಖಾತೆ ಸಂಖ್ಯೆ 1165/1311 ವಿಸ್ತೀರ್ಣ 603.0 ಚದರ ಅಡಿ ಆಸ್ತಿಯು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದನ್ನು ವಾದ ಪತ್ರದಲ್ಲಿ ಸೇರಿಸಿರುವುದಿಲ್ಲವೆಂದು ಸದರಿ ಆಸ್ತಿಯನ್ನು ವಾದ ಪತ್ರದಲ್ಲಿ ಸೇರಿಸಲು ಸಲ್ಲಿಸಿರುತ್ತಾರೆ. ಆದರೆ 5 ನೇ ಪ್ರತಿವಾದಿಯ ಪ್ರಕಾರ ಸದರಿ ಆಸ್ತಿಯು ವಾದಿಗಳು ಮತ್ತು ಪ್ರತಿವಾದಿಗಳ ಪತ್ರಾರ್ಜಿತ ಆಸ್ತಿಯಾಗಿರುವುದಿಲ್ಲ. ವಾದಿಗೆ ಈ ವಿಚಾರವು ಗೊತ್ತಿದ್ದರು ಸಹ ವಾದ ಪತ್ರದಲ್ಲಿ ಸೇರಿಸಲು ತಿದ್ದುಪಡಿಯನ್ನು ಕೋರಿ ಸಲ್ಲಿಸಿರುತ್ತಾರೆ. ಸುಸ್ಥಿತವಾದ ಕಾನೂನಿನ ಪ್ರಕಾರ ಕುಟುಂಬದ ಎಲ್ಲಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಕ್ಷಗಾರ ನಡುವೆ ವಿಭಾಗವಾಗಬೇಕು, ಭಾಗಾಂಶ ಆಸ್ತಿಗಳ ವಿಭಾಗವು ಊರ್ಜಿತವಾಗುವುದಿಲ್ಲ ಆದ್ದರಿಂದ ವಾದಿಯು ವಾದ ಪತ್ರದಲ್ಲಿ ಸೇರಿಸಲು ಕೋರಿರುವ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆಯೋ ಅಥವಾ

ಇಲ್ಲವೇ ಎಂದು ಈ ಹಂತದಲ್ಲಿ ನಿರ್ಣಯಿಸಲು ಸಾಧ್ಯವಿಲ್ಲ, ಪಿತ್ರಾರ್ಜಿತ ಆಸ್ತಿಯೋ ಅಥವಾ ಇಲ್ಲವೇ ಎಂದು ವಿಚಾರಣೆ ಹಂತದಲ್ಲಿ ತಿಳಿಯ ಬಹುದಾಗಿರುತ್ತದೆ. ವಾದ ಪತ್ರದಲ್ಲಿ ಸೇರಿಸಲು ಕೋರಿರುವ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂಬುದನ್ನು ಸಾಬೀತು ಪಡಿಸುವ ಭಾರ ವಾದಿಗಳ ಮೇಲೆ ಇರುತ್ತದೆ. ಪ್ರಸ್ತಾವಿತ ತಿದ್ದುಪಡಿಯು ದಾವೆಯ ಸ್ವರೂಪವನ್ನು ಬದಲಾಯಿಸುವುದಿಲ್ಲ ಮತ್ತು ಹೊಸ ವ್ಯಾಜ್ಯ ಕಾರಣವನ್ನು ಸೃಷ್ಟಿಸುವುದಿಲ್ಲ. ಸದರಿ ತಿದ್ದುಪಡಿಗೆ ಅನುಮತಿ ನೀಡಿದರೆ ಪ್ರತಿವಾದಿಗಳಿಗೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ ಮತ್ತು ತಿದ್ದುಪಡಿಯ ವಾದ ಪತ್ರವನ್ನು ಸಲ್ಲಿಸಿದ ನಂತರ ಪ್ರತಿವಾದಿಗಳಿಗೆ ಹೆಚ್ಚುವರಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಸ್ವತಂತ್ರರಿರುತ್ತಾರೆ ಈ ಎಲ್ಲ ಕಾರಣದಿಂದ ಈ ನ್ಯಾಯಾಲಯವು ಅಂಶ ಸಂಖ್ಯೆ 1 ನ್ನು ಸಕರಾತ್ಮಕವಾಗಿ ಉತ್ತರಿಸಿರುತ್ತದೆ.

9. <u>ಅಂಶ ಸಂಖ್ಯೆ **2:-**</u> ಈ ಮೇಲ್ಕಂಡ ಕಾರಣಗಳಿಗಾಗಿ ಅಂತಿಮ.

<u>ಆದೇಶ</u>

ಮಾನ್ಯ ವಾದಿಯ ಪರ ವಕೀಲರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VI ನಿಯಮ 17 ರ ಅಡಿಯಲ್ಲಿ ಸಲ್ಲಿಸಿರುವ 7 ನೇ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ವಾದಿಗಳಿಗೆ ವಾದ ಪತ್ರವನ್ನು ಮುಂದಿನ ಸುನಾವಣೆವರೆಗೆ ತಾವು ಕೋರಿರುವ ತಿದ್ದುಪಡಿಯನ್ನು ಮಾಡಿ ತಿದ್ದುಪಡಿಯ ವಾದ ಪತ್ರವನ್ನು ಸಲ್ಲಿಸಲು ಅನುಮತಿ ನೀಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 21 ನೇ ಜೂನ್ ?2023 ರಂದು ನಾನು ಉದ್ಘೋಷಿಸಿದ್ದೇನೆ)

**(ಕೆ.ಪಿ. ಸಿದ್ದಪ್ಪಾಜಿ)**
ಅಪರ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು ನಾಗಮಂಗಲ.